<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 2170 |
| **ಉತ್ತರಿಸಬೇಕಾದ ದಿನಾಂಕ:** | : 26.03.2026 |
| **ಸದಸ್ಯರ ಹೆಸರು** | : ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸುವ ಸಚಿವರು** | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಾಧಕ ಕ್ರೀಡಾಪಟುಗಳನ್ನು ಸರ್ಕಾರದ ವಿವಿಧ ಉದ್ಯೋಗಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆಯೇ;<br>ನೇಮಕ ಮಾಡಿಕೊಳ್ಳಲಾಗುತ್ತಿದ್ದಲ್ಲಿ, ಯಾವ ಯಾವ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದವರಿಗೆ ಎ, ಬಿ ಮತ್ತು ಸಿ ದರ್ಜೆ ಹುದ್ದೆ ನೀಡಲಾಗುವುದು; ಶೈಕ್ಷಣಿಕ ಅರ್ಹತೆಯನ್ನೂ ಪರಿಗಣಿಸಲಾಗುವುದೇ; ಅದಕ್ಕೆ ಇರುವ ಮಾನದಂಡಗಳೇನು; ವಿವರವಾದ ಮಾಹಿತಿ ನೀಡುವುದು; | ಹೌದು.<br>ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 204 ಸೇನೆನಿ 2022, ದಿನಾಂಕ:21-03-2023ರನ್ವಯ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೆಲವು ಹುದ್ದೆಗಳಿಗೆ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ವ್ಯಕ್ತಿಗಳ ನೇಮಕಾತಿ) (ವಿಶೇಷ) ನಿಯಮಗಳು, 2023ರಲ್ಲಿ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಗೇಮ್ಸ್ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ ವೃಂದ ಹಾಗೂ ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಗುಂಪು-ಬಿ ಮತ್ತು ಇತರ ವೃಂದದ ಹುದ್ದೆಗಳಿಗೆ (ಗುಂಪು-ಸಿ ಮತ್ತು ಗುಂಪು-ಡಿ) ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ.<br><br>ಸದರಿ ನಿಯಮಗಳಡಿ ಕ್ರೀಡಾಪಟುಗಳ ಈ ಕೆಳಕಂಡ ಶೈಕ್ಷಣಿಕ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ:<br><br>ಅ) ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯವು ಯಾವುದೇ ವಿಷಯದಲ್ಲಿ ನೀಡಿದ ಸ್ನಾತಕ ಪದವಿಯನ್ನು ಹೊಂದಿರುವ ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ಗಳಲ್ಲಿ ಪದಕ ವಿಜೇತರಿಗೆ ಗುಂಪು-ಎ ಹುದ್ದೆಗೆ ನಿಯಮಾನುಸಾರ ನೇಮಿಸಲಾಗುವುದು.<br><br>ಆ) ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯವು ಯಾವುದೇ ವಿಷಯದಲ್ಲಿ ನೀಡಿದ ಸ್ನಾತಕ ಪದವಿಯನ್ನು ಹೊಂದಿರುವ ಏಷಿಯನ್ ಅಥವಾ ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ನಲ್ಲಿ ಪದಕ ವಿಜೇತರಾದವರಿಗೆ ಗುಂಪು-ಬಿ ಹುದ್ದೆಗೆ ನಿಯಮಾನುಸಾರ ನೇಮಿಸಲಾಗುವುದು.<br><br>ಇ) ಸ್ನಾತಕ ಪದವಿಗಿಂತ ಕಡಿಮೆ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರುವ ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್, ಏಷಿಯನ್ ಅಥವಾ ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತರಾದವರಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿನ ಯಾವುದೇ ಸಮೂಹ-ಸಿ ಅಥವಾ ಗ್ರೂಪ್-ಡಿ ಹುದ್ದೆಗಳಿಗೆ ನಿಯಮಾನುಸಾರ ನೇಮಿಸಲಾಗುವುದು.<br><br>ಪದಕ ವಿಜೇತರು ಭಾರತದ ನಾಗರಿಕನಾಗಿರಬೇಕು ಮತ್ತು ರಾಷ್ಟ್ರ ಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಪೂರ್ವದಲ್ಲಿ ಕನಿಷ್ಠ ಹತ್ತು ವರ್ಷಗಳ ಅವಧಿಯವರೆಗೆ ಕರ್ನಾಟಕದ ನಿವಾಸಿಯಾಗಿರಬೇಕು ಎಂಬ ನಿಬಂಧನೆ ನಿಗದಿಪಡಿಸಲಾಗಿದೆ. |
| ಆ) | ಸಾಧಕ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿ ನೀಡಲು ಬಾಕಿ ಇದ್ದಲ್ಲಿ, ಎಷ್ಟು ಅರ್ಜಿಗಳು ಪರಿಶೀಲನಾ | ಪ್ರಸ್ತುತ ವಿಶೇಷ ನೇಮಕಾತಿ ನಿಯಮದಡಿ ಆಯ್ಕೆಯಾಗಿ ಅವಕಾಶ ಪತ್ರ (Offer Letter) ನೀಡಲಾಗಿರುವ ಒಟ್ಟು 13 ಕ್ರೀಡಾಪಟುಗಳಲ್ಲಿ |

| | | |
|---|---|---|
| | ಹಂತದಲ್ಲಿವೆ; ಎಷ್ಟು ಪ್ರಕರಣಗಳು ಆಯ್ಕೆ ಸಮಿತಿ ಮುಂದಿವೆ; (ವಿವರ ನೀಡುವುದು) | ಒಟ್ಟು 11 ಕ್ರೀಡಾಪಟುಗಳಿಗೆ ವಿವಿಧ ಇಲಾಖೆಗಳಲ್ಲಿ ಈಗಾಗಲೇ ನೇಮಕಾತಿ ಮಾಡಲಾಗಿದ್ದು, ಒಬ್ಬ (1) ಕ್ರೀಡಾಪಟುವಿಗೆ ಗುಂಪು-ಎ ವೃಂದದ ಹುದ್ದೆಗೆ ನೇಮಕಾತಿ ಆದೇಶ ನೀಡುವ ಪೂರ್ವದಲ್ಲಿನ ಶೈಕ್ಷಣಿಕ ಮತ್ತಿತರ ಅರ್ಹತಾ ದಾಖಲೆಗಳ ನೈಜತೆ ದೃಢೀಕರಣ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಒಬ್ಬ (1) ಕ್ರೀಡಾಪಟುವಿಗೆ ಗುಂಪು-ಸಿ ವೃಂದದ ಹುದ್ದೆಗೆ ಅವಕಾಶ ಪತ್ರ ನೀಡಲಾಗಿದ್ದು, ಗುಂಪು-ಬಿ ವೃಂದದ ಹುದ್ದೆ ನೀಡುವಂತೆ ಕೋರಿಕೆ ಸಲ್ಲಿಸಿದ್ದಾರೆ. ಸದರಿ ಮನವಿ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>ಅಲ್ಲದೆ, ಏಷಿಯನ್ ಪ್ಯಾರಾ ಗೇಮ್ಸ್ ನಲ್ಲಿ ಪದಕ ವಿಜೇತರಾದ ಒಬ್ಬ (1) ಕ್ರೀಡಾಪಟು ತಾನು ಪದವಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು, ಪದವಿಯನ್ನು ಪರಿಗಣಿಸುವಂತೆ ಕೋರಿರುತ್ತಾರೆ. ಸದರಿ ಕ್ರೀಡಾಪಟುವಿನ ಮನವಿ ಹಿನ್ನೆಲೆಯಲ್ಲಿ ಪದವಿ ಪ್ರಮಾಣ ಪತ್ರ ಸಲ್ಲಿಸುವವರೆಗೆ ಅವರ ಪ್ರಕರಣವನ್ನು ವಿಲೇ ಇಡಲು ತೀರ್ಮಾನಿಸಲಾಗಿದ್ದು, ಪ್ರಸ್ತುತ ಸದರಿ ಕ್ರೀಡಾಪಟು ಪದವಿ ವಿದ್ಯಾರ್ಹತೆಯನ್ನು ಪೂರೈಸಿದ್ದು, ಗುಂಪು-ಬಿ ವೃಂದದ ಹುದ್ದೆಗೆ ಪರಿಗಣಿಸುವಂತೆ ಕೋರಿರುತ್ತಾರೆ. ಸದರಿ ಕ್ರೀಡಾಪಟು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.<br><br>ಸದರಿ ವಿಶೇಷ ನೇಮಕಾತಿ ನಿಯಮಗಳಡಿ ಗುಂಪು-ಬಿ ವೃಂದದ ಹುದ್ದೆಗೆ ನೇಮಕಕ್ಕೆ ಕೋರಿ ಅರ್ಜಿ ಸಲ್ಲಿಸಿರುವ ಒಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಆಯ್ಕೆ ಸಮಿತಿ ಸಭೆ ಜರುಗಿದ್ದು, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲೂ ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸಲಾಗಿದೆಯೇ ಅಥವಾ ಸೀಮಿತ ಇಲಾಖೆಗಳಲ್ಲಿ ಮಾತ್ರ ಮೀಸಲಾತಿ ಇದೆಯೇ; ಇಲಾಖಾವಾರು ಶೇಕಡವಾರು ಎಷ್ಟು ಮೀಸಲಾತಿ ಸೌಲಭ್ಯವಿದೆ? (ವಿವರವಾದ ಮಾಹಿತಿ ಒದಗಿಸುವುದು) | ದಿನಾಂಕ:21-03-2023ರ ವಿಶೇಷ ನೇಮಕಾತಿ ನಿಯಮಗಳಡಿ ಗುಂಪು-ಎ ವೃಂದಕ್ಕೆ ಗುರುತಿಸಲಾದ 09 ವಿವಿಧ ಇಲಾಖೆಗಳಲ್ಲಿ ಹಾಗೂ ಗುಂಪು-ಬಿ ವೃಂದಕ್ಕೆ ಗುರುತಿಸಲಾದ 15 ವಿವಿಧ ಇಲಾಖೆಗಳಲ್ಲಿ ಸಾಧಕ ಕ್ರೀಡಾಪಟುಗಳನ್ನು ನೇರ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಅಧಿಸೂಚನೆಯ ಸಂಬಂಧಿತ ಉದ್ಧೃತ ಭಾಗದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. ರಾಜ್ಯದ ಯಾವುದೇ ಸಿವಿಲ್ ಸೇವೆಯಲ್ಲಿನ ಪ್ರತಿಯೊಂದು ವೃಂದದಲ್ಲಿ ಒಳಗೊಂಡ ಯಾವುದೇ ಗರಿಷ್ಠ ಮಿತಿ ಇಲ್ಲದೆ ಗ್ರೂಪ್ ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಪದಕ ವಿಜೇತರನ್ನು ನಿಯಮಾನುಸಾರ ನೇಮಕ ಮಾಡಲಾಗುವುದು.<br><br>ಪೊಲೀಸ್ ಇಲಾಖೆಯಲ್ಲಿ ಡಿ.ವೈ.ಎಸ್.ಪಿ., ಸಬ್ ಇನ್ಸ್‌ಪೆಕ್ಟರ್ ಹಾಗೂ ಕಾನ್ಸ್‌ಟೇಬಲ್‌ಗಳ ನೇರ ನೇಮಕಾತಿಯಲ್ಲಿ ಸಾಧಕ ಕ್ರೀಡಾಪಟುಗಳಿಗೆ ಶೇಕಡ 3ರಷ್ಟು ಮೀಸಲಾತಿ ಜಾರಿಗೊಳಿಸಲಾಗಿದೆ.<br><br>ಅದೇ ರೀತಿ, ಅರಣ್ಯ ಇಲಾಖೆಯಲ್ಲಿ ಸಾಧಕ ಕ್ರೀಡಾಪಟುಗಳಿಗೆ ಶೇಕಡ 3 ರಷ್ಟು ಮೀಸಲಾತಿ ಕಲ್ಪಿಸುವ ಬಗ್ಗೆ ನಿಯಮಗಳನ್ನು ರೂಪಿಸುವ ಕುರಿತು ಅರಣ್ಯ ಇಲಾಖೆಯ ಹಂತದಲ್ಲಿ ಕ್ರಮ ವಹಿಸಲಾಗುತ್ತಿದೆ.<br><br>ಅಲ್ಲದೆ, ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲಿ ಕ್ರೀಡಾಪಟುಗಳಿಗೆ ಶೇಕಡ 2 ರಷ್ಟು ಮೀಸಲಾತಿ ಕಲ್ಪಿಸುವ ಬಗ್ಗೆ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ. |

ವೈಎಸ್ ಡಿ-ಇವೈಡಬ್ಲ್ಯೂ/67/2026

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ

## ಅನುಸೂಚಿ

## (3ನೇ ನಿಯಮವನ್ನು ನೋಡಿ)

| ಕ್ರಮ ಸಂಖ್ಯೆ | ಸೇವೆ | ವೃಂದ / ಹುದ್ದೆ |
|---|---|---|
| (1) | (2) | (3) |
| | ಗ್ರೂಪ್ -'ಎ' | |
| 1 | ಕರ್ನಾಟಕ ಆಡಳಿತ ಸೇವೆ. | ಕರ್ನಾಟಕ ಆಡಳಿತ ಸೇವೆ ಗ್ರೂಪ್-ಎ (ಕಿರಿಯ ಶ್ರೇಣಿ). |
| 2 | ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವೆ. | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು. |
| 3 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜುಗಳ ಸೇವೆ. | ಆಹಾರ ಮತ್ತು ನಾಗರಿಕ ಸರಬರಾಜುಗಳ ಉಪ ನಿರ್ದೇಶಕರು. |
| 4 | ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ). | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್. |
| 5 | ಕರ್ನಾಟಕ ಸಾಮಾನ್ಯ ಸೇವೆ (ಸಮಾಜ ಕಲ್ಯಾಣ ಶಾಖೆ) | ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ. |
| 6 | ಕರ್ನಾಟಕ ಕಾರ್ಮಿಕ ಸೇವೆ. | ಸಹಾಯಕ ಕಾರ್ಮಿಕ ಆಯುಕ್ತರು. |
| 7 | ಕರ್ನಾಟಕ ರಾಜ್ಯ ಪೊಲೀಸ್ ಸೇವೆ. | ಪೊಲೀಸ್ ಉಪ ಅಧೀಕ್ಷಕರು. |
| 8 | ಕರ್ನಾಟಕ ಮೀಸಲು ಪೊಲೀಸ್ ಸೇವೆ. | ಸಹಾಯಕ ಕಮಾಂಡೆಂಟ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್. |
| 9 | ಕರ್ನಾಟಕ ಖಜಾನೆ ಸೇವೆ. | ಖಜಾನೆ ಅಧಿಕಾರಿ. |
| | ಗ್ರೂಪ್ -ಬಿ | |
| 10 | ಕರ್ನಾಟಕ ಆಡಳಿತ ಸೇವೆ. | ತಹಶೀಲ್ದಾರ್ ಗ್ರೇಡ್-II. |
| 11 | ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವೆ. | ವಾಣಿಜ್ಯ ತೆರಿಗೆ ಅಧಿಕಾರಿ. |
| 12 | ಕರ್ನಾಟಕ ಸಹಕಾರ ಲೆಕ್ಕ ಪರಿಶೋಧನಾ ಸೇವೆ | ಸಹಾಯಕ ಮುಖ್ಯ ಲೆಕ್ಕ ಪರಿಶೋಧಕರು. |
| 13 | ಕರ್ನಾಟಕ ಸಹಕಾರ ಸೇವೆ. | ಸಹಕಾರ ಸಂಘಗಳ ಸಹಾಯಕ ನಿಬಂಧಕರು. |
| 14 | ಕರ್ನಾಟಕ ಉದ್ಯೋಗ ಮತ್ತು ತರಬೇತಿ ಸೇವೆ. | ಉದ್ಯೋಗ ಅಧಿಕಾರಿ. |
| 15 | ಕರ್ನಾಟಕ ಅಬಕಾರಿ ಸೇವೆ | ಅಬಕಾರಿ ಉಪ ಅಧೀಕ್ಷಕರು. |
| 16 | ಕರ್ನಾಟಕ ಸಾಮಾನ್ಯ ಸೇವೆ ಯುವ ಸಬಲೀಕರಣ ನಿರ್ದೇಶನಾಲಯ. | ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡೆ. |
| 17 | ಕರ್ನಾಟಕ ಸಾಮಾನ್ಯ ಸೇವೆ (ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಶಾಖೆ). | ಭೂ ದಾಖಲೆಗಳ ಸಹಾಯಕ ನಿರ್ದೇಶಕರು. |
| 18 | ಕರ್ನಾಟಕ ಕಾರ್ಮಿಕ ಸೇವೆ. | ಕಾರ್ಮಿಕ ಅಧಿಕಾರಿ. |
| 19 | ಕರ್ನಾಟಕ ಮಾರುಕಟ್ಟೆ ಸೇವೆ. | ಜಿಲ್ಲಾ ಮಾರುಕಟ್ಟೆ ಅಧಿಕಾರಿ. |
| 20 | ಕರ್ನಾಟಕ ಪೌರಾಡಳಿತ ಸೇವೆ. | ಮುಖ್ಯ ಅಧಿಕಾರಿ ಗ್ರೇಡ್-I. |
| 21 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜುಗಳ ಸೇವೆ. | ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜುಗಳು. |
| 22 | ಕರ್ನಾಟಕ ಬಂದೀಖಾನೆಗಳ ಆಡಳಿತ ಸೇವೆ. | ಬಂದೀಖಾನೆಗಳ ಸಹಾಯಕ ಅಧೀಕ್ಷಕರು. |
| 23 | ಕರ್ನಾಟಕ ಖಜಾನೆ ಸೇವೆ. | ಸಹಾಯಕ ಖಜಾನೆ ಅಧಿಕಾರಿ. |
| 24 | ಕರ್ನಾಟಕ ತೂಕಗಳು ಮತ್ತು ಅಳತೆಗಳ ಸೇವೆ. | ಸಹಾಯಕ ನಿರ್ದೇಶಕರು, ಕಾನೂನು ಮಾಪನಾ ಶಾಸ್ತ್ರ. |

(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)



ile No. YSD-EYW/247/2025-YSD_CORD-YOUTH SEC (Computer No. 2000094)
ienerated from eOffice by VENKATALAKSHMI V, YSD-CORD-SO(VL), SECTION OFFICER, YOUTH SEC on 20/03/2026 04:16 PM